ಒಟ್ಟಾರೆ ಅಕ್ಟೋಬರ್ – 2012ರ ಅಂತ್ಯದಲ್ಲಿ ಭೌತಿಕ ಪ್ರಗತಿ ಶೇ.64 ರಷ್ಟು ಮತ್ತು ಆರ್ಥಿಕ ಪ್ರಗತಿ ಶೇ.67ರಷ್ಟು ಆಗಿದೆ.

ಆ) ನಮ್ಮ ಮೆಟ್ರೋದ ಉತ್ತರ–ದಕ್ಷಿಣ ಕಾರಿಡಾಲ್‌ಗಳ ಸುರಂಗ ಮಾರ್ಗದಲ್ಲಿ ಪೈಲಿಂಗ್ ಕಾರ್ಯವು ಪ್ರಗತಿಯಲ್ಲಿದೆ. ಶೇ. 17ರಷ್ಟು ಕಾಮಗಾರಿ ಮುಗಿದಿದೆ. ಈ ಮಾರ್ಗದಲ್ಲಿ ದಿನಾಂಕ: 19.10.2012ರಂದು ಸುರಂಗದ ಕಾಮಗಾರಿಯೂ ದಕ್ಷಿಣ ಮಾರ್ಗದಿಂದ ಶುರುವಾಗಿದೆ.

ಇ) ಬಿಎಂಆರ್‌ಸಿಎಲ್, ಮೆಟ್ರೋ ರೈಲು ಯೋಜನೆಯ ಹಂತ–1ನ್ನು ಉತ್ತಮವಾಗಿ ಅನುಷ್ಠಾನಗೊಳಿಸುತ್ತಿದ್ದು, ರೀಚ್–1ರ ಬೈಯ್ಯಪ್ಪನ ಹಳ್ಳಿಯಿಂದ ಎಂ.ಜಿ.ರಸ್ತೆವರೆಗಿನ 6.75 ಕಿ.ಮೀ.ನ ಯೋಜನೆ ಪೂರ್ಣಗೊಂಡಿದ್ದು, ದಿನಾಂಕ: 20.10.2011ರಂದು ಸಾರ್ವಜನಿಕರ ಓಡಾಟಕ್ಕಾಗಿ ಕಾರ್ಯಾರಂಭಮಾಡಿರುತ್ತದೆ.

ಈ) 2013ರಲ್ಲಿ ರೀಚ್–3 ಮತ್ತು 3ಎ ಅಂದರೆ ಪೀಣ್ಯ ದಿಂದ ಸಂಪಿಗೆ ರಸ್ತೆ ನಿಲ್ದಾಣದವರೆಗಿನ 10.54 ಕಿ.ಮೀ. ಗಳ ಉದ್ದದ 10 ನಿಲ್ದಾಣಗಳನ್ನೊಳಗೊಂಡ ಮಾರ್ಗದಲ್ಲಿ ಮೆಟ್ರೋ ರೈಲು ಸಂಚಾರ ಪ್ರಾರಂಭವಾಗುವುದು.

ಬಿಡುಗಡೆಗೊಂಡ ಅನುದಾನ

418 : (632)

ಶ್ರೀ ಮಂಜುನಾಥ್ ಹೆಚ್.ಪಿ. (ಹುಣಸೂರು)

ಅ) ಸರ್ಕಾರದಿಂದ ಹುಣಸೂರು ತಾಲ್ಲೂಕು ಕೃಷಿ ಉತ್ಪನ್ನ ಮಾರುಕಟ್ಟೆಯ ಅಭಿವೃದ್ಧಿಗಾಗಿ 2008–09ನೇ ಸಾಲಿನಿಂದ ಪ್ರಸಕ್ತ ಸಾಲಿನವರೆಗೆ ಬಿಡುಗಡೆಯಾದ ಅನುದಾನವೆಷ್ಟು?

ಆ) ಹುಣಸೂರು ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯಿಂದ 2008–09 ರಿಂದ ಈ ತಹಲ್‌ವರೆಗೆ ಯಾವ ಯಾವ ಅಭಿವೃದ್ಧಿ ಕಾಮಗಾರಿ/ಯೋಜನೆಗಳನ್ನು ಕೈಗೊಳ್ಳಲಾಗಿದೆ?

ಇ) ಈ ಕಾಮಗಾರಿಗಳಿಗೆ ಮಂಜೂರಾದ ಹಣವೆಷ್ಟು?

ಶ್ರೀ ಎಸ್.ಕೆ. ಬೆಳ್ಳುಬ್ಬಿ
(ಕೃಷಿ ಮಾರುಕಟ್ಟೆ ಹಾಗೂ ಹಜ್ ಮತ್ತು ವಕ್ಫ್ ಸಚಿವರು)

ಅ) 2008–09ನೇ ಸಾಲಿನಿಂದ ಪ್ರಸಕ್ತ ಸಾಲಿನವರೆಗೆ ಸರ್ಕಾರದಿಂದ ಯಾವುದೇ ಅನುದಾನ ಬಿಡುಗಡೆಯಾಗಿರುವುದಿಲ್ಲ.

ಆ) ಮಾರುಕಟ್ಟೆ ಸಮಿತಿ ನಿಧಿಯಿಂದ 39 ಕಾಮಗಾರಿಗಳನ್ನು ರೂ.171.40 ಲಕ್ಷಗಳಲ್ಲಿ ಕೈಗೊಂಡಿದ್ದು ಅವುಗಳ ವಿವರಗಳನ್ನು ಅನುಬಂಧದಲ್ಲಿ ನೀಡಿದೆ.

ಇ) 2008–09–ರೂ.102.70 ಲಕ್ಷ
2009–10–ರೂ.32.00 ಲಕ್ಷ
2012–13–ರೂ.36.70 ಲಕ್ಷ

ಅನುಬಂಧ

2008–09 ನೇ ಸಾಲಿನಿಂದ 2012–13ನೇ ಸಾಲಿನವರೆಗೆ ಹುಣಸೂರು ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯಲ್ಲಿ ಕೈಗೊಂಡಿರುವ ಅಭಿವೃದ್ಧಿ ಕಾಮಗಾರಿಗಳ ವಿವರಗಳು

ಕ್ರಮ ಸಂಖ್ಯೆ	ಕಾಮಗಾರಿಯ ಹೆಸರು	ಅಂದಾಜು ಮೊತ್ತ	ಖರ್ಚಾದ ಮೊತ್ತ	ಕಾಮಗಾರಿಯ ಹಂತ
1	2	3	4	5
	2008–2009			
1	ಹುಣಸೂರು ಮುಖ್ಯ ಮಾರುಕಟ್ಟೆ ಪ್ರಾಂಗಣದ ಆಡಳಿತ ಕಛೇರಿ ಕಟ್ಟಡದ ಮೇಲ್ಛಾವಣಿಯ ಹವಾಮಾನ ಪದರ ಬದಲಾಯಿಸುವ ಕಾಮಗಾರಿ	1.65	1.72	ಮುಗಿದಿದೆ.
2	ರತ್ನಪುರಿ ಉಪ ಮಾರುಕಟ್ಟೆ ಪ್ರಾಂಗಣದ ಕಛೇರಿ ಕಟ್ಟಡದ ವಿಶೇಷ ದುರಸ್ಥಿ ಕಾಮಗಾರಿ	1.65	1.64	ಮುಗಿದಿದೆ.
3	ಹುಣಸೂರು ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿ ಉಳಿದ ಭಾಗಕ್ಕೆ ರಕ್ಷಣಾ ಗೋಡೆ ನಿರ್ಮಾಣ ಕಾಮಗಾರಿ.	4.40	4.10	ಮುಗಿದಿದೆ.

ಕ್ರಮ ಸಂಖ್ಯೆ	ಕಾಮಗಾರಿಯ ಹೆಸರು	ಅಂದಾಜು ಮೊತ್ತ	ಖರ್ಚಾದ ಮೊತ್ತ	ಕಾಮಗಾರಿಯ ಹಂತ
1	2	3	4	5
4	ಹುಣಸೂರು ಪಟ್ಟಣದ ರೈತ ಸಂತೆ ನಿರ್ಮಾಣ	40.00	38.60	ಮುಗಿದಿದೆ
5	ಹುಣಸೂರು ಮುಖ್ಯ ಮಾರುಕಟ್ಟೆ ಪ್ರಾಂಗಣದ ಹೊರ ಹೋಗುವ ರಸ್ತೆ ಡಾಂಬರೀಕರಣ ಹಾಗೂ ಚರಂಡಿ ನಿರ್ಮಾಣ ಮಾಡುವ ಕಾಮಗಾರಿ	10.00	8.30	ಮುಗಿದಿದೆ
6	ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿ 2 ಸಂ.ಡಿ ಮಾದರಿ ಅಂಗಡಿ-ವ-ಗೋದಾಮು ನಿರ್ಮಾಣ ಮಾಡುವ ಕಾಮಗಾರಿ	10.00	9.57	ಮುಗಿದಿದೆ
7	ರತ್ನಪುರಿ ಉಪ ಮಾರುಕಟ್ಟೆ ಪ್ರಾಂಗಣದಲ್ಲಿ ಪಶುವೈದ್ಯಶಾಲೆ ಕಟ್ಟಡದ ಸುತ್ತ ಕಾಂಪೌಂಡ್ ನಿರ್ಮಾಣ ಮಾಡುವ ಕಾಮಗಾರಿ	5.00	5.41	ಮುಗಿದಿದೆ
8	ಸಮಿತಿ ವ್ಯಾಪ್ತಿಯಲ್ಲಿ ಬರುವ ತೆಂಕನಕೊಪ್ಪಲ್ ಗ್ರಾಮದಲ್ಲಿ ರೈತರ ಸಂತೆ ನಿರ್ಮಾಣ ಕಾಮಗಾರಿ	12.00	12.38	ಮುಗಿದಿದೆ

ಕ್ರಮ ಸಂಖ್ಯೆ	ಕಾಮಗಾರಿಯ ಹೆಸರು	ಅಂದಾಜು ಮೊತ್ತ	ಖರ್ಚಾದ ಮೊತ್ತ	ಕಾಮಗಾರಿಯ ಹಂತ
1	2	3	4	5
9	ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿರುವ ಆಡಳಿತ ಕಛೇರಿಗೆ ಹೊಂದಿಕೊಂಡಂತೆ ಉಪಾಧ್ಯಕ್ಷರ ಕೊಠಡಿ ನಿರ್ಮಾಣ ಕಾಮಗಾರಿ.	2.00	2.08	ಮುಗಿದಿದೆ
10	ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿರುವ ಆಡಳಿತ ಕಛೇರಿಯ ಅಧ್ಯಕ್ಷರು, ಕಾರ್ಯದರ್ಶಿಯವರ ಹಾಗೂ ಸಭಾಂಗಣದ ನೆಲಹಾಸು ಬದಲಾಯಿಸುವ ಕಾಮಗಾರಿ	2.00	2.09	ಮುಗಿದಿದೆ
11	ಈ ಸಮಿತಿಯ ಮನುಗನಹಳ್ಳಿ ತನಿಖಾ ಠಾಣೆಯ ಕಟ್ಟಡ ನಿರ್ಮಾಣ ಮಾಡುವ ಕಾಮಗಾರಿ	2.00	2.09	ಮುಗಿದಿದೆ
12	ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿರುವ ರೈತ ಭವನದ ಮುಂಭಾಗದ ಚರಂಡಿ ಮತ್ತು ಡಕ್ ಡ್ರೈನ್ ನಿರ್ಮಾಣ ಮಾಡುವ ಕಾಮಗಾರಿ	5.00	4.44	ಮುಗಿದಿದೆ

ಕ್ರಮ ಸಂಖ್ಯೆ	ಕಾಮಗಾರಿಯ ಹೆಸರು	ಅಂದಾಜು ಮೊತ್ತ	ಖರ್ಚಾದ ಮೊತ್ತ	ಕಾಮಗಾರಿಯ ಹಂತ
1	2	3	4	5
13	ಸಮಿತಿಯ ಬನ್ನಿಕುಪ್ಪೆ ಗ್ರಾಮೀಣ ಸಂತೆ ಅಭಿವೃದ್ಧಿಪಡಿಸುವ ಜಾಗದಿಂದ ಮುಖ್ಯ ರಸ್ತೆಗೆ ಸಂಪರ್ಕ ಕಲ್ಪಿಸುವ ಕಾಮಗಾರಿ	2.00	2.09	ಮುಗಿದಿದೆ
14	ಮೈಲಾಂಬೂರು ಗ್ರಾಮದ ಕೊಳದ ರಸ್ತೆಯಿಂದ ಪಟೇಲರ ಜಮೀನಿಗೆ ಹೋಗುವ ರಸ್ತೆ ಕಾಮಗಾರಿ	1.00	1.04	ಮುಗಿದಿದೆ
15	ಗದ್ದಿಗ ಶಾಂತಿಪುರ ಮುಖ್ಯ ರಸ್ತೆಯಿಂದ ಕಾಡುವಡ್ಡರ ಗುಡಿ ರಸ್ತೆ ಕಾಮಗಾರಿ (ಕುಟ್ಟವಾಡಿ ಕೆರೆ ಪಕ್ಕ)	1.00	1.04	ಮುಗಿದಿದೆ
16	ತಿಪ್ಪೂರು ಮಾರಮ್ಮನ ದೇವಸ್ಥಾನದಿಂದ ಸರ್ವೆ ನಂ.5ರ ಜಮೀನಿಗೆ ಹೋಗುವ ರಸ್ತೆ ಕಾಮಗಾರಿ	1.00	1.04	ಮುಗಿದಿದೆ
17	ಬೋಳೆನಹಳ್ಳಿ ಚೋಳೇನಹಳ್ಳಿ ಮುಖ್ಯ ರಸ್ತೆಯಿಂದ ಬೋಳನ ಹಳ್ಳಿ ಕೆರೆಗೆ ಹೋಗುವ ರಸ್ತೆ ಕಾಮಗಾರಿ	1.00	1.04	ಮುಗಿದಿದೆ

ಕ್ರಮ ಸಂಖ್ಯೆ	ಕಾಮಗಾರಿಯ ಹೆಸರು	ಅಂದಾಜು ಮೊತ್ತ	ಖರ್ಚಾದ ಮೊತ್ತ	ಕಾಮಗಾರಿಯ ಹಂತ
1	**2**	**3**	**4**	**5**
18	ಹುಣಸೂರು ರತ್ನಪುರಿ ಮುಖ್ಯ ರಸ್ತೆಯಿಂದ ಸರ್ವೆ ನಂ.5 ರ ಜಮೀನಿಗೆ ಹೋಗುವ ರಸ್ತೆ ಕಾಮಗಾರಿ	1.00	1.04	ಮುಗಿದಿದೆ
	ಒಟ್ಟು ಮೊತ್ತ	**108.70**	**107.71**	
	2009–10			
1	ಈ ಸಮಿತಿಯ ರತ್ನಪುರಿ ಉಪ ಮಾರುಕಟ್ಟೆ ಪ್ರಾಂಗಣದಲ್ಲಿ ಉಳಿದ ಭಾಗಕ್ಕೆ ಕಾಂಪೌಂಡ್ ನಿರ್ಮಾಣ ಮಾಡುವ ಕಾಮಗಾರಿ	5.00	4.98	ಮುಗಿದಿದೆ
2	ಈ ಸಮಿತಿಯ ರತ್ನಪುರಿ ಉಪ ಮಾರುಕಟ್ಟೆ ಪ್ರಾಂಗಣದಲ್ಲಿರುವ ಪಶು ವೈದ್ಯಶಾಲೆ ಕಟ್ಟಡದ ನೆಲಹಾಸು ಬದಲಾಯಿಸುವ ಕಾಮಗಾರಿ	2.00	2.08	ಮುಗಿದಿದೆ

ಕ್ರಮ ಸಂಖ್ಯೆ	ಕಾಮಗಾರಿಯ ಹೆಸರು	ಅಂದಾಜು ಮೊತ್ತ	ಖರ್ಚಾದ ಮೊತ್ತ	ಕಾಮಗಾರಿಯ ಹಂತ
1	2	3	4	5
3	ಈ ಸಮಿತಿಯ ರತ್ನಪುರಿ ಉಪ ಮಾರುಕಟ್ಟೆಯ ಕಛೇರಿ ಮುಂಭಾಗದಲ್ಲಿ ಡ್ರೈನ್ ಮತ್ತು ಡೆಕ್ ನಿರ್ಮಾಣ ಮಾಡುವ ಕಾಮಗಾರಿ	2.00	2.08	ಮುಗಿದಿದೆ.
4	ಈ ಸಮಿತಿಯ ರತ್ನಪುರಿ ಉಪ ಮಾರುಕಟ್ಟೆ ಪ್ರಾಂಗಣದಲ್ಲಿರುವ ಆಡಳಿತ ಕಛೇರಿಯ ಮೇಲ್ಛಾವಣಿಯ ಹವಾಮಾನ ಪದರ ಅಳವಡಿಸುವ ಕಾಮಗಾರಿ	2.00	2.06	ಮುಗಿದಿದೆ.
5	ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿರುವ ರೈತ ಭವನದ ಕಟ್ಟಡದ ಮೇಲ್ಛಾವಣಿ ಹವಾಮಾನ ಪದರ ಅಳವಡಿಸುವ ಹಾಗೂ ಬಣ್ಣ ಬಳಿಯುವ ಕಾಮಗಾರಿ	2.00	1.97	ಮುಗಿದಿದೆ.

ಕ್ರಮ ಸಂಖ್ಯೆ	ಕಾಮಗಾರಿಯ ಹೆಸರು	ಅಂದಾಜು ಮೊತ್ತ	ಖರ್ಚಾದ ಮೊತ್ತ	ಕಾಮಗಾರಿಯ ಹಂತ
1	2	3	4	5
6	ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿರುವ ಆಡಳಿತ ಕಛೇರಿಗೆ ಹೊಂದಿಕೊಂಡಂತೆ ಗಣಕ ಯಂತ್ರ ಕೊಠಡಿ ನಿರ್ಮಾಣ ಮಾಡುವ ಕಾಮಗಾರಿ	2.00	1.91	ಮುಗಿದಿದೆ
7	ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿರುವ 3 ನೇ ಅಡ್ಡ ರಸ್ತೆಯ ಎರಡೂ ಕಡೆ ಡ್ರೈನ್ ನಿರ್ಮಾಣ ಮಾಡುವ ಕಾಮಗಾರಿ	5.00	4.94	ಮುಗಿದಿದೆ
8	ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿರುವ ಅತಿಥಿ ಗೃಹ ಕಟ್ಟಡದ ಮೇಲ್ಛಾವಣಿ ಹವಾಮಾನ ಪದರ ಅಳವಡಿಸುವ ಕಾಮಗಾರಿ	2.00	2.08	ಮುಗಿದಿದೆ
9	ಹುಣಸೂರು-ಹನಗೂಡಿಗೆ ಹೋಗುವ ಮುಖ್ಯ ರಸ್ತೆಯಿಂದ ಹೊನ್ನೇನಹಳ್ಳಿ ಗ್ರಾಮದ ಸರ್ವೆ ನಂ.72ರ ಸುತ್ತ ಮುತ್ತಲಿನ ಜಮೀನಿಗೆ ಹೋಗುವ ರಸ್ತೆ ಕಾಮಗಾರಿ	1.00	1.04	ಮುಗಿದಿದೆ

ಕ್ರಮ ಸಂಖ್ಯೆ	ಕಾಮಗಾರಿಯ ಹೆಸರು	ಅಂದಾಜು ಮೊತ್ತ	ಖರ್ಚಾದ ಮೊತ್ತ	ಕಾಮಗಾರಿಯ ಹಂತ
1	2	3	4	5
10	ಮೈದನಹಳ್ಳಿ ಕೆರೆ ಪಕ್ಕದ ರಸ್ತೆಯಿಂದ ಕುಮಾರನ ಜಮೀನು ಹಾಗೂ ಇತರೆ ಜಮೀನಿಗೆ ಹೋಗುವ ರಸ್ತೆ ಕಾಮಗಾರಿ	1.00	1.04	ಮುಗಿದಿದೆ
11	ಚೌಡಿಕಟ್ಟೆ ಜಮೀನಿನ ರಸ್ತೆಯಿಂದ ಶಿವಗಾಮಿ ಜಮೀನು ಹಾಗೂ ಇತರೆ ಜಮೀನಿಗೆ ಹೋಗುವ ರಸ್ತೆ ಕಾಮಗಾರಿ	1.00	1.04	ಮುಗಿದಿದೆ
12	ರತ್ನಪುರಿ ಉಪ ಮಾರುಕಟ್ಟೆ ವ್ಯಾಪ್ತಿಯ ಕುಡಿನೀರು ಮುದ್ದನಹಳ್ಳಿ ಹೊಸ ಗ್ರಾಮದ ಠಾಣೆಯಿಂದ ಅಶೋಕ್‌ರಾವ್ ಜಮೀನಿಗೆ ಹೋಗುವ ರಸ್ತೆ ಕಾಮಗಾರಿ	1.00	1.04	ಮುಗಿದಿದೆ
13	ಚೋಳೇನಹಳ್ಳಿ ಗ್ರಾಮದ ರಸ್ತೆಯಿಂದ ಚಿಕ್ಕ ಮರೀಗೌಡರ ಮಕ್ಕಳ ಜಮೀನಿಗೆ ಹೋಗುವ ರಸ್ತೆ ಕಾಮಗಾರಿ	1.00	1.04	ಮುಗಿದಿದೆ

ಕ್ರಮ ಸಂಖ್ಯೆ	ಕಾಮಗಾರಿಯ ಹೆಸರು	ಅಂದಾಜು ಮೊತ್ತ	ಖರ್ಚಾದ ಮೊತ್ತ	ಕಾಮಗಾರಿಯ ಹಂತ
1	2	3	4	5
14	ಕುಮಾರನ ಜಮೀನಿನ ರಸ್ತೆಯಿಂದ ಬೋರೇಯಲ್ಲಿನ ಜಮೀನಿಗೆ ಹೋಗುವ ರಸ್ತೆ ಕಾಮಗಾರಿ	1.00	1.04	ಮುಗಿದಿದೆ
15	ಚಿಲ್ಲಹಳ್ಳಿ–ಬೆಂಕಿಪುರ ರಸ್ತೆಯಿಂದ ಮುದ್ದನಕಟ್ಟೆ ಹಳ್ಳದ ಜಮೀನಿಗೆ ಹೋಗುವ ರಸ್ತೆ ಕಾಮಗಾರಿ	1.00	1.04	ಮುಗಿದಿದೆ
16	ಬಿ.ಎಂ.ರಸ್ತೆಯಿಂದ ಕೊಳಗಟ್ಟದ ಹೊಸ ಕೆರೆಯ ಅಕ್ಕಪಕ್ಕದ ಜಮೀನಿಗೆ ಹೋಗುವ ರಸ್ತೆ ಕಾಮಗಾರಿ	1.00	1.04	ಮುಗಿದಿದೆ
17	ಹೊಸ ರಾಮೇನಹಳ್ಳಿ ಮುಖ್ಯ ರಸ್ತೆ 7ನೇ ಕಿ.ಮೀ.ನಲ್ಲಿ ದೊಡ್ಡಕೆರೆ ಮಾರ್ಗವಾಗಿ ರೈತರ ಜಮೀನಿಗೆ ಹೋಗುವ ರಸ್ತೆಯ ಪಾಪನಾಯಕ ಮತ್ತು ಸೋಮನಾಯಕರವರ ಜಮೀನಿಂದ ಸೋಮನಹಳ್ಳಿಗೆ ಹೋಗುವ ಸಂಪರ್ಕ ರಸ್ತೆ ಕಾಮಗಾರಿ	1.00	1.04	ಮುಗಿದಿದೆ

ಕ್ರಮ ಸಂಖ್ಯೆ	ಕಾಮಗಾರಿಯ ಹೆಸರು	ಅಂದಾಜು ಮೊತ್ತ	ಖರ್ಚಾದ ಮೊತ್ತ	ಕಾಮಗಾರಿಯ ಹಂತ
1	2	3	4	5
18	ಕೊಮ್ಮೇಗೌಡನ ಕೊಪ್ಪಲು ಗ್ರಾಮದಿಂದ ರೈತರ ಜಮೀನಿಗೆ ಹೋಗುವ ಸಂಪರ್ಕ ರಸ್ತೆ ಕಾಮಗಾರಿ	1.00	1.04	ಮುಗಿದಿದೆ
	ಒಟ್ಟು ಮೊತ್ತ	**32.00**	**32.50**	
	2012–13			
1	ಹುಣಸೂರು ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿ 50 ಮೆಟ್ರಿಕ್ ಟನ್ ಸಾಮರ್ಥ್ಯದ ಎಲೆಕ್ಟ್ರಾನಿಕ ತೂಕದ ಯಂತ್ರ ಅಳವಡಿಸುವ ಕಾಮಗಾರಿ	18.00		ಟೆಂಡರ್ ಕರೆಯಬೇಕು
2	ಹುಣಸೂರು ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿ ಹುಣಸೂರು–ಮೈಸೂರು ಮುಖ್ಯ ರಸ್ತೆಗೆ ಅಭಿಮುಖವಾಗಿ ಅಂಗಡಿ ಮಳಿಗೆಗಳ ನಿರ್ಮಾಣ	13.20		ಟೆಂಡರ್ ಕರೆಯಬೇಕು
3	ಹುಣಸೂರು ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿ ಹೈ ಮಾಸ್ಟ್ ದೀಪ ಅಳವಡಿಸುವ ಕಾಮಗಾರಿ	5.50		ಟೆಂಡರ್ ಕರೆಯಬೇಕು
	ಒಟ್ಟು ಮೊತ್ತ	**36.70**	**0.00**	